ಒಂದಾಣೆ ಮಾಲೆ 241

ಗೀತಗೋವಿಂದ

(ಭಾಗ ೧)

ಕನ್ನಡ ಗದ್ಯಾನುವಾದ:

ಶ್ರೀ। ಕೆ. ಎ. ದೇವದಾಸ,

ಸಾಹಿತ್ಯ ಶಿರೋಮಣಿ.

ಭಾಗ ೧: ಎರಡು ಸರ್ಗಗಳು

೧. ಸಾಮೋದ ದಾಮೋದರ.

೨. ಅಕ್ಲೇಶ ಕೇಶವ.

1959

ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

ಹಿಡಿದೊತ್ತಿ ಅವನು ಮುಖಚುಂಬನಗೈದನು. ಆಗಿನ ರತಿಸುಖದಿಂದ ನಾನು ಆಲಸ್ಯಹೊಂದಿದ್ದೆ. ಅವನ ನೇತ್ರಕಮಲಗಳೂ ಅಲ್ಪ ಮುಚ್ಚಿದ್ದವು. ಆಲಸ್ಯದಂತಾಗಿ ನಾನು ತಳಿರ ಮಂಚಕ್ಕುರುಳಿದೆನು. ಆಗಲೂ ಮಧುಸೂದನನು ನನ್ನನ್ನು ನೋಡಿ ಪುನಃ ಮದನವಿವಶನಾಗಿದ್ದಾನೆಂದು ನಾನು ತಿಳಿದೆನು. ಸಖಿ, ರಸಿಕಮಣಿಯಾದ ಆ ಹರಿಯನ್ನು ನನ್ನೊಂದಿಗೆ ಈಗ ರಮಿಸುವಂತೆ ಮಾಡಲಾರೆಯಾ?"

(ರಾಧೆಯು ಈ ರೀತಿ ಅಷ್ಟಪದಿಯಿಂದ ತನ್ನ ಹಿಂದಿನ ಸಮಾಗಮ ಸುಖವನ್ನು ಹಾಗೆಯೇ ಸಖಿಯೊಡನೆ ಹೇಳಿದಳು. ಹರಿಗೆ ನನ್ನಲ್ಲಿ ಯಥಾರ್ಥ ಅನುರಾಗವಿದೆಯೆಂದು ಕೂಡಾ ಗೆಳದಿಯೊಡನೆ ಹೇಳುತ್ತಾಳೆ. ಕವಿಯು ಆ ಮಾತನು ಶ್ಲೋಕರೂಪವಾಗಿ ಹೇಳಿರುತ್ತಾನೆ. ಅದರ ಸಾರವಿದು—)

"ಸಖಿ, ಮಾಧವನು ಬೇರೆ ತರುಣಿಯರೊಂದಿಗೆ ಇರುವಾಗಲೂ ಕೂಡಾ ನನ್ನನ್ನು ಕಂಡೊಡನೆಯೇ ಅವನ ಕೈಯಿಂದ ಮುರಳಿಯು ಬಿದ್ದು ಹೋಗುತ್ತದೆ. ಆ ಸುಂದರಿಯರನ್ನು ಕಡೆಗಣ್ಣಿನ ನೋಟದಿಂದಲೇ ಸರಿದು ಹೋಗಲು ಸೂಚನೆಕೊಡುತ್ತಾನೆ. ಅವನ ಕಪೋಲಗಳು ಬೆವರುತ್ತದೆ, ಮಾತ್ರವಲ್ಲ—ಅವನು ತುಂಬಾ ನಾಚಿಕೊಳ್ಳುತ್ತಾನೆ. ವ್ರಜಸುಂದರಿಯರ ನಡುವೆ ನಿಂತು ನಾಚಿ, ನಗುವ ಮುಗ್ಧಮನೋಹರ ಮುಖ—ಅಹಾ! ಏನು ಸುಂದರ!"

(ಈ ಪ್ರಕಾರ ರಾಧೆಯು ಸಖಿಯೊಂದಿಗೆ ಹೇಳಿದಳೆಂಬಲ್ಲಿಗೆ ಈ ಅಕ್ಲೇಶಕೇಶವ ಎಂಬ ಎರಡನೆಯ ಸರ್ಗವನ್ನು ಮುಗಿಸುವ ನಿಮಿತ್ತ ಕವಿಯು ಶ್ರೀಹರಿಯ ಪ್ರಾರ್ಥನೆ ಮಾಡುತ್ತಾನೆ.)

ಯಾವ ಹರಿಯು ಗೋಪಿಕಾಸ್ತ್ರೀಯರನ್ನು ತೃಪ್ತಿಪಡಿಸಿದನಂತರ ಅವರ ಮುಗ್ಧಮನೋಹರ ಹಾಗೂ ಅಭಿಪ್ರಾಯಗರ್ಭಿತ ಮಂದಹಾಸವನ್ನೂ, ಓಲಾಟ-ಒದ್ದಾಟಗಳಿಂದ ಸಡಿಲಿದ ಕೇಶಪಾಶವನ್ನೂ, ಹುಬ್ಬು ಗಂಟಿಕ್ಕಿದ ನೋಟವನ್ನೂ, ಅಕಾರಣವಾಗಿ ಕೈ ಎತ್ತಿದಾಗ ಕಂಡ ಬಾಹುಮೂಲ ಮತ್ತು ಸ್ತನತಟಗಳನ್ನೂ ಕದ್ದುನೋಡಿ, ಧ್ಯಾನಪರನಾಗಿ ನಿಂತಿರುವನೋ ಆ ತರುಣ ಕೇಶವನು ನಿಮ್ಮ ಅಭೀಷ್ಟವನ್ನು ನೆರವೇರಿಸಲಿ—ನಿಮ್ಮನ್ನೂ ತೃಪ್ತಿಪಡಿಸಲಿ.

(ಇಲ್ಲಿಗೆ ಜಯದೇವ ಕವಿಯ ಗೀತಗೋವಿಂದದ ಎರಡನೆಯ ಸರ್ಗವು ಮುಗಿದುದು.)

ಗೀತಗೋವಿಂದ

[ಭಾಗ ೧]

ಸಾಮೋದದಾಮೋದರ

(ಶ್ರೀ ಜಯದೇವ ಮಹಾಕವಿಯು ಸಂಸ್ಕೃತದಲ್ಲಿ ಬರೆದ ಗ್ರಂಥವಿದು. ರಾಧಾಕೃಷ್ಣರ ಸುಂದರ ಸಮಾಗಮವನ್ನು ಚಿತ್ರಿಸಿದ ಸಂಗೀತಕಾವ್ಯ. ಸಂಸ್ಕೃತ ಸಾಹಿತ್ಯದಲ್ಲಿ ಇದು ಅಮೋಘ ಕೃತಿ. ಶೃಂಗಾರರಸದ ಮೂರ್ತ ಸ್ವರೂಪ, ಅಂತೆಯೇ ಭಗವದ್ವಿಷಯಕವಾದುದರಿಂದ ಭಕ್ತಿಯ ಉಗಮ.

ಅಷ್ಟಪದಿಯೆಂಬುದು ಇದರ ನಾಮಾಂತರ. ಎಂಟೆಂಟು ಪದ್ಯಗಳ 24 ಸಂಗ್ರಹಗಳೂ ಅನೇಕ ಶ್ಲೋಕಗಳೂ ಇರುವ ಈ ಗ್ರಂಥದ ಸಾಧಾರಣವಾದ ಒಂದು ಭಾಷಾಂತರವಿದು. ಮಂಗಲಾಚರಣೆಯೇ ಯಾವ ರೀತಿಯಲ್ಲಿದೆಯೆಂದು ನೋಡಿರಿ:—)

'ರಾಧೆ, ಆಕಾಶದಲ್ಲಿ ಮೋಡಕವಿದಿದೆ. ಕತ್ತಲಾಗುತ್ತಾ ಬಂತು. ತಮಾಲವೃಕ್ಷಗಳಿಂದ ತುಂಬಿದ ಕಾಡಿದು. ಇವನಿಗೆ ಕತ್ತಲಾದರೆ ಭಯ ಬೇರೆ. ಆದ್ದರಿಂದ ನೀನು ಇವನನ್ನು ಈಗಲೇ ಮನೆಗೆ ತಲಪಿಸು' ಎಂದು ನಂದನು ಹೇಳಿದೊಡನೆ, ರಾಧಾಕೃಷ್ಣರು ಅಲ್ಲಿಂದ ಹೊರಟು ಯಮುನಾತೀರದ ದಾರಿಯಾಗಿ ಬರುವಾಗ ಅಲ್ಲಲ್ಲಿಯ ಲತಾಮಂದಿರಗಳಲ್ಲೂ, ಮರಗಳೆಡೆಯಿಂದಲೂ ಆಚರಿಸಿದ ಆ ಏಕಾಂತ ವಿಹಾರವಿಲಾಸ ಕೇಳಿಗಳು ನಿಮಗೆ ಸುಖ ನೀಡಲಿ.

(ಅನಂತರ ಕವಿಯು 2 ಶ್ಲೋಕಗಳಿಂದ ತನ್ನ ಕಾವ್ಯಮಹಿಮೆಯನ್ನೂ, ಒಂದು ಶ್ಲೋಕದಿಂದ ತನ್ನ ಸಮಕಾಲೀನ ಕವಿಗಳನ್ನೂ ಸ್ಮರಿಸಿ ಒಂದನೆಯ ಅಷ್ಟಪದಿಯಿಂದ ದಶಾವತಾರ ಸ್ತುತಿಗೈಯುತ್ತಾನೆ:—)

'ಸಂಸಾರಸಾಗರವನ್ನು ಸುಲಭವಾಗಿ ದಾಟಿಸಲು ನಾವೆಯಾಕಾರದ ಮೀನರೂಪವಂ ತಾಳಿ, ಪ್ರಳಯಸಾಗರದಲ್ಲಿ ಮುಳುಗಿದ ವೇದವನ್ನುದ್ಧರಿಸಿದ ಹೇ ಕೇಶವ, ನಿನ್ನ ನಾಮವೇ ಬೆಳಗಲಿ. ಆದಿಕೂರ್ಮಸ್ವರೂಪ,

ಅತಿ ವಿಶಾಲವಾದ ನಿನ್ನ ಬೆನ್ನಿನಲ್ಲಿಯಲ್ಲವೇ ಈ ಭೂಮಿಯು ಸ್ಥಿರವಾಗಿರುವದು! ಹೇ ವರಾಹರೂಪೀ ಭಗವನ್, ಚಂದ್ರನಲ್ಲಿ ಕಾಣುವ ಕಲಂಕರೇಖೆಯಂತೆ ನಿನ್ನ ದಂತದಲ್ಲಿ ಈ ಧರಣಿಯು ಶೋಭಿಸುತ್ತಿದೆ. ಹಿರಣ್ಯಕಶಿಪು ಶರೀರವೆಂಬ ಭ್ರಮರವನ್ನು ಪುಡಿಗೈದ ನಿನ್ನ ಅದ್ಭುತ ಕರಕಮಲದಲ್ಲಿ ರಾರಾಜಿಸುವ ನಖಗಳ ಮಹಿಮೆಯನೇನೆಂಬೆ! ದೇವ, ಆಶ್ಚರ್ಯಕರವಾದುದು ನಿನ್ನ ವಾಮನಲೀಲೆ ಕಾಲಹೆಜ್ಜೆಯಿಂದಲೇ ಬಲಿಯನ್ನು ಸೋಲಿಸಿದೆ. ಆ ನಿನ್ನ ಪಾದಾಗ್ರದಿಂದ ಉದ್ಭವಿಸಿದ ಗಂಗೆಯೋ ಲೋಕಪಾವನೆ. ಕ್ಷತ್ರಿಯರ ನೆತ್ತರಿನ ನೀರಲ್ಲಿ ಪ್ರಪಂಚವನ್ನು ತೊಳೆದು, ಸಮಸ್ತ ಜನರ ಪಾಪವನ್ನು ತೊಲಗಿಸಿದ ಪರಶುರಾಮನು ನೀನೆ. ಬಲಭದ್ರ, ಶುಭ್ರವಾದ ನಿನ್ನ ದೇಹದಲ್ಲಿ ಕಾರ್ಮೋಡದಂತಿರುವ ವಸ್ತ್ರ—ಅದು ನಿನ್ನ ನೇಗಿಲಿನ ಹೊಡೆತಕ್ಕಂಜಿ ಕಪ್ಪಾಗಿ ಸನಿಹಕ್ಕೆ ಬಂದ ಯಮುನೆಯ ದಿವ್ಯ ನೀಲಾಂಬರವಲ್ಲವೇ? ಭಗವನ್ ಬುದ್ಧ, ಯಜ್ಞವು ವೇದಪ್ರಬೋಧಿತವಾದರೂ ಅದರಲ್ಲಿ ಪಶುವಧೆಯನ್ನು ಕಂಡುದರಿಂದ ಯಾಜ್ಞಿಕ ಮಂತ್ರಭಾಗವನ್ನು ದೂಷಿಸಿ ಲೋಕಕ್ಕೆ ಬೆಳಕನ್ನು ನೀಡಿರುವೆ ನೀನು. ಮ್ಲೇಚ್ಛಸಮೂಹವನ್ನು ಪರಿಹರಿಸಲಿಕ್ಕಾಗಿ ಧೂಮಕೇತುಭಯಂಕರವಾದ ಖಡ್ಗವನ್ನು ಧರಿಸಿ ಅವತರಿಸಿದ ಕಲ್ಕಿ ನೀನೇ. ದೇವಾಧಿದೇವ, ನಿನಗೆ ಅನಂತ ವಂದನೆ.

(ಈ ರೀತಿ ದಶಾವತಾರ ಸ್ತುತಿಯಾದ ತರುವಾಯ ಕವಿಯು ಈ ಅಷ್ಟಪದಿಯ ಕೊನೆಗೆ ಉಪಸಂಹಾರ ಗೀತೆ ಹಾಡುತ್ತಾನೆ:—)

'ದಶವಿಧ ರೂಪಗಳನ್ನು ತಾಳಿದ ಹೇ ಕೇಶವ, ಶುಭದಾಯಕವೂ ಕರ್ಣಾನಂದಕರವೂ, ಸಂಸಾರಕ್ಕೆ ನಿತ್ಯಧನವೂ ಆದ ಜಯದೇವನ ವಚನವನ್ನು ಆಲಿಸು.)

(ಕವಿಯು ತರುವಾಯ ಒಂದು ಶ್ಲೋಕದಲ್ಲಿ 'ವೇದಾನುದ್ಧರತೆ—ಇತ್ಯಾದಿಯಾಗಿ ದಶಾವತಾರ ಸ್ತೋತ್ರಮಾಡಿ, ಪುನಃ ಶ್ರೀಹರಿಯ ಗುಣಗಾನದ ಎರಡನೆಯ ಅಷ್ಟಪದಿಯನ್ನು ಹಾಡುತ್ತಾನೆ. ಅದರ ಸಾರವಿದು:–)

'ಕುಂಡಲಧಾರಿಯಾಗಿ, ಸುಂದರ ವನಮಾಲೆಯನ್ನು ಧರಿಸಿ, ಲಕ್ಷ್ಮೀದೇವಿಯ ಕುಚಮಂಡಲವನ್ನು ಆಶ್ರಯಿಸಿರುವ ಹರಿಯೇ, ನೀನು ಸೂರ್ಯಮಂಡಲದ ಅಲಂಕಾರನು, ಸಂಸಾರತಾಪನಾಶಕನು; ಮುನಿಜನರ

ಮಾನಸವೆಂಬ ಮಾನಸದ ಹಂಸಸ್ವರೂಪನು. ಹೇ ಕಾಲಿಯಮರ್ದನ, ಜನ ಮನೋರಂಜಕನಾದ ನೀನು ಯಾದವಕುಲಕಮಲಕ್ಕೆ ಪ್ರಭಾಕರನಾಗಿರುವೆ. ಮಧು—ಮುರ—ನರಕರೆಂಬ ದೈತ್ಯರನ್ನು ನಾಶಮಾಡಿದ ನಿನಗೆ ಗರುಡ ಪಕ್ಷಿಯೇ ವಾಹನ. ಹೇ ಕಮಲದಳಾಯತಲೋಚನ, ಸಂಸಾರಬಂಧನದಿಂದ ವಿಮೋಚನೆಮಾಡುವ ಹಾಗೂ ಮೂರುಲೋಕಗಳೆಂಬ ಮನೆಯೊಳಗಣ ನಿಧಿ ನೀನು. ಸೀತಾದೇವಿಗೆ ಅಲಂಕಾರನಾದ ಪರಮಾತ್ಮನೇ, ದೂಷಣ, ದಶಕಂಧರಾದ್ಯರನ್ನು ಸಮರದಲ್ಲಿ ಸದೆಬಡಿದ ಸರ್ವಾಂತರ್ಯಾಮಿಯೂ ನೀನೆ. ಕಾರ್ಮುಗಿಲ ಕಾಂತಿವೆತ್ತ ಕೇಶವ, ಆ ಮಂದರಪರ್ವತವನ್ನು ಕಿರುಬೆರಳಲ್ಲೆತ್ತಿ ಹಿಡಿದ ನೀನು—ಲಕ್ಷ್ಮೀದೇವಿಯ ಮುಖಚಂದ್ರನಲ್ಲಿ ಚಕೋರಕಿಶೋರದಂತೆ ರಂಜಿಸುವೆಯಲ್ಲ! ದೇವ, ನಿನ್ನ ಪಾದಂಗಳಿಗೆ ನಾವು ತಲೆಬಾಗಿದ್ದೇವೆ. ಶುಭ ಕರುಣಿಸು ಹರಿಯೇ!"

(ಈ ಅಷ್ಟಪದಿಯ ಕೊನೆಗೂ ಉಪಸಂಹಾರ ಹೇಳಿ, ಕವಿಯು ಶ್ರೀ ರಾಧಾಕೃಷ್ಣವಿಲಾಸಕಥನವನ್ನಾರಂಭಿಸುವ ಸಲುವಾಗಿ ಪ್ರಾರ್ಥಿಸುತ್ತಾನೆ:—)

'ಪದ್ಮಾದೇವಿಯ ವಕ್ಷೋಜಾಲಿಂಗನದಿಂದ ಕುಂಕುಮಕೇಸರವುತಾಗಿ, ಅದರಿಂದಲೇ ಅನುರಾಗವನ್ನು ವ್ಯಕ್ತಪಡಿಸುತ್ತಾ, ಸ್ಮರಲೀಲಾಯಾಸದಿಂದ ಬೆವರುತ್ತಿರುವ ಮಧುಸೂದನನ ಸುಂದರ ವಕ್ಷಸ್ಥಳವು ನಿಮ್ಮ ಅಭಿಲಾಷೆಯನ್ನು ಪೂರೈಸಲಿ."

(ವಿಷಯಪ್ರವೇಶ)

ಅದೊಂದು ವಸಂತಕಾಲ. ವಾಸಂತೀ ಕುಸುಮಗಳಂತೆ ಸುಕುಮಾರವಾದ ಅಂಗಗಳುಳ್ಳ ರಾಧೆಯು ಆದೊಂದು ವನಪ್ರದೇಶದಲ್ಲಿ ತಿರುಗಾಡುತ್ತಾಳೆ. ಅವಳು ಮದನಪರವಶಳಾಗಿ ಚಿಂತಾಕುಲಳಾಗಿದ್ದಾಳೆ. ಹಲವು ಬಾರಿ ಶ್ರೀಕೃಷ್ಣಸಮಾಗಮವನ್ನು ಬಯಸಿಯೂ ಮುನ್ನಡಿಯಿಡದೆ ಅಲ್ಲೇ ಇದ್ದಾಳೆ. ಆಗ ಅವಳ ಗೆಳದಿಯು ಬಂದು ಅವಳೊಡನೆ ಸುರಸವಾಗಿ ಹೀಗೆಂದಳು:—

(ವಿರಹಿಗಳನ್ನು ಉದ್ವೇಗಗೊಳಿಸುವ ವಸಂತಕಾಲದ ಮಹಿಮೆಯು ಸಖಿಯ ಮಾತಿನಿಂದ ಈ ಮೂರನೆಯ ಅಷ್ಟಪದಿಯಲ್ಲಿ ವರ್ಣಿತವಾಗಿದೆ—)

'ಓ ಎನ್ನ ಸಖಿಯೇ, ವಿರಹಿಗಳಿಗೆ ದುಃಖದಾಯಕವಾದ—ಆದರೂ ಮನೋಹರವಾದ ಈ ವಸಂತಕಾಲದಲ್ಲಿ ಶ್ರೀಹರಿಯು ಇಲ್ಲಿ ಈ ವನಭೂಮಿಯಲ್ಲಿ ತರುಣಿಯರೊಂದಿಗೆ ನೃತ್ಯಮಾಡುತ್ತಿದ್ದಾನೆ. ಆಹ! ವಸಂತಕಾಲದ ಸೊಬಗೇ! ಮಲಯಮಾರುತವು ಸುಂದರವಾದ ಲವಂಗತೆಯ ಸಂಪರ್ಕದಿಂದ ಪರಿಮಳವನ್ನಾಂತು ಮಂದವಾಗಿ ಬೀಸುತ್ತಿದೆ. ತುಂಬಿಗಳ ಝೇಂಕಾರದೊಂದಿಗೆ ಕೋಗಿಲೆಗಳ ಇನಿದನಿಯು ಲತಾಕುಂಜಗಳಲ್ಲಿ ಇಂಪಾಗಿ ಕೇಳಿಸುತ್ತಿದೆ. ಸಂಚಾರಿ ಯುವಕರ ಕಾಂತೆಯರು ಉಲ್ಲಾಸಭರಿತರಾಗಿ, ಮನನೇಚ್ಛೆಯಿಂದ ತುಂಬುಹೃದಯರಾಗಿ ವಿಹರಿಸುತ್ತಲೂ ವಿಲಪಿಸುತ್ತಲೂ ಇದ್ದಾರೆ. ಬಕುಲ ಪುಷ್ಪಗಳಲ್ಲಿ ತುಂಬಿಗಳು ತುಂಬಿ, ಗೆಲ್ಲುಗಳಿಗೆ ಭಾರವಾಗಿದೆ,ನೋಡಲ್ಲಿ. ತಮಾಲವು ಚಿಗುರಿ ಕಸ್ತೂರಿಯ ಕಂಪನ್ನು ಬೀರುತ್ತಿದೆ ಈ ಪಲಾಶ ಕುಸುಮಗಳು ತರುಣರ ಹೃದಯವನ್ನೆ ಚದರಿಸುವ ಕಂದರ್ಪನ ನಖಗಳಂತೆ ಶೋಭಿಸುತ್ತವೆ. ನಾಗಕೇಸರ ಕುಸುಮವು ಕಾಮದೇವನ ಕನಕದಂಡದ ಕೊಡೆಯಂತೆ ತೋರುತ್ತದೆ ತುಂಬಿಗಳು ಮುತ್ತಿದ ಪಾಟಲೀಗೊಂಚಲು ಮದನನ ಬತ್ತಳಿಕೆಯಂತಿದೆ. ತರುಣವಯಸ್ಸಿನ ಮರಗಳು ಪ್ರಾಯಮೀರಿದ ಜನರನ್ನು ನೋಡಿ ಹೂನಗೆ ಬೀರುತ್ತವೆ. ಕೇದಿಗೆಗಳು ಮಾತ್ರ ವಿರಹಿಗಳನ್ನು ನೋಯಿಸುವ ಆಯುಧಗಳಂತಿವೆ. ಗೆಳದಿ, ಪುಷ್ಪಗಳ ಸೌರಭ್ಯ ಎತ್ತಲೂ ವ್ಯಾಪಿಸಿದ ಈ ಕಾಲವು ಮುನಿಜನರ ಮನಸ್ಸಿನಲ್ಲೂ ಮೋಹವನ್ನು ಹುಟ್ಟಿಸುವದು. ಯುವಕರ ಯುವತಿಯರಿಗೀಕಾಲ—ಸಹಜ ಬಂಧು. ಮಾಲತೀಲತೆ ಚಲಿಸುತ್ತಿದೆ. ಅದರ ಆಲಿಂಗನದಿಂದ ಮಾಮರ ಪುಷ್ಪಿಸಿ ರೋಮಾಂಚನಗೊಂಡಿದೆ. ಈ ಸುಂದರವೃಂದಾವನದ ಪಕ್ಕದಲ್ಲೆ ಹರಿಯುವ ಯಮುನೆಯ ಸೊಬಗೇನು!'

(ಗೆಳದಿಯ ವಸಂತವರ್ಣನೆ ಈ ಅಷ್ಟಪದಿಯಲ್ಲೇ ಮುಗಿಯಲಿಲ್ಲ. ಮುಂದಿನ 2 ಪದ್ಯಗಳೂ ವಸಂತಋತು ವರ್ಣನೆಯಾಗಿರುತ್ತವೆ. ಸಖಿಯು ಮಾತನ್ನು ಮುಂದರಿಸುತ್ತಾಳೆ—)

'ಮಂದಮಾರುತನು ಅರೆಬಿರಿದ ಮಲ್ಲಿಕಾಲತೆಗಳನ್ನು ಅಲ್ಲಾಡಿಸಿ, ಅಲ್ಲಿಂದೆದ್ದ ಪರಾಗದಿಂದ ಕಾನನವನ್ನೇ ಪರಿಮಳಗೊಳಿಸುತ್ತಾನೆ. ಕೇತಕೀ ಸೌರಭ್ಯಕ್ಕೆ ಮಾರುಹೋದ ಮಾರುತನು ಅಲ್ಲಿಂದ ಬೀಸುವಾಗ ಅದು ಮದನಬಾಣಗಳ ಪ್ರಾಣವಾಯುವೆಂದೇ ತೋರುವುದು. ಯಾತ್ರಿಕರಾಗಿ

ನಡುದಾರಿಯಲ್ಲಿರುವ ವಿರಹಿಗಳು ಈ ಕಾಲವನ್ನು ಹೇಗೆ ಕಳೆಯುತ್ತಾರೋ, ಯಾಕೆಂದರೆ ಮಕರಂದ ಹೀರಲು ಬಂದು ತುಂಬಿಗಳು ಮಾವಿನ ಚಿಗುರನ್ನು ಅಲ್ಲಾಡಿಸುತ್ತವೆ. ಆಗ ಅಲ್ಲಿ ಕೂಡಿ ನಲಿಯುತ್ತಿದ್ದ ಕೋಗಿಲೆಗಳು ಮಧುರಧ್ವನಿಯಿಂದ ಬೊಬ್ಬಿಡುವವು. ಅದು ಆ ದಾರಿಹೋಕ ವಿರಹಿಗಳಿಗೆ ಕರ್ಣಕಠೋರವಾಗದಿದ್ದೀತೇ? ಆಗ ಅವರು ಕ್ಷಣಕಾಲ ಏಕಾಗ್ರಚಿತ್ತರಾಗಿ ಕುಳಿತು, ಧ್ಯಾನಮಗ್ನರಾಗಿ, ತಮ್ಮ ಕಾಂತೆಯರನ್ನು ಚಿತ್ತದಲ್ಲಿ ಪಡೆದು ಉಲ್ಲಾಸಗೊಳ್ಳುವರು.'

(ಸಖಿಯು ಈ ರೀತಿ ಹೇಳುತ್ತಿರುವಾಗ ಅಲ್ಲೇ ಸ್ವಲ್ಪ ದೂರದಲ್ಲಿ ಶ್ರೀಕೃಷ್ಣನು ಗೋಪಾಂಗನೆಯರ ಆಲಿಂಗನಕ್ಕಾಗಿ ಅವರೊಂದಿಗೆ ತಿರುಗಾಡುತ್ತಾ ಆಡುತ್ತಾ ರಸನಿಮಗ್ನನಾಗಿದ್ದನು. ಅದನ್ನು ಸಖಿಯು ನೋಡಿದಳು—ನೋಡುತ್ತಾ ರಾಧೆಯೊಂದಿಗೆ ಪುನಃ ಹೇಳುವಳು—ಅದೀಗ ನಾಲ್ಕನೆಯ ಅಷ್ಟಪದಿಯಲ್ಲಿ ಕಾಣಬಹುದು—)

'ಸಖಿ ರಾಧೆ ನೀನು ವಿಲಾಸಪ್ರಿಯಳಲ್ಲವೇ? ಅಲ್ಲಿ ನೋಡು—ಮುಗ್ಧೆಯರಾದ ಅನೇಕ ಕಾಮಿನಿಯರು ಕ್ರೀಡಾರಸದಲ್ಲಿ ತಲ್ಲೀನರಾಗಿದ್ದಾರೆ. ಅವರೊಂದಿಗೆ ಹರಿಯೂ ಆಡುತ್ತಿದ್ದಾನೆ. ನೋಡು—ನೀಲದೇಹಕ್ಕೆ ಚಂದನ ಲೇಪಿಸಿ, ಪೀತಾಂಬರವನ್ನುಟ್ಟು, ವನಮಾಲೆಯನ್ನು ತೊಟ್ಟಿದ್ದಾನೆ. ಅವನು ಅವರೊಂದಿಗೆ ಆಡುವಾಗ ಮಣಿಕುಂಡಲ ಚಲಿಸಿ, ಕಪೋಲಗಳಿಗೆ ಮೆರಗುಕೊಟ್ಟಂತಾಗಿ, ಅದು ಅವನ ಎಳೆನಗೆ ಸೊಬಗನ್ನು ಇಮ್ಮಡಿಸುತ್ತದೆ. ಅದೊ, ಒಬ್ಬಳು ತನ್ನ ವಿಪುಲಸ್ತನ ಭಾರವನೊಡ್ಡಿ, ಹರಿಯನ್ನಪ್ಪಿ, ಆತನೊಂದಿಗೆ ಪಂಚಮರಾಗವನ್ನು ವಿಸ್ತರಿಸುತ್ತಾಳೆ. ಮತ್ತೊಬ್ಬಳು ತನ್ನ ವಿಲಾಸಮಧುರನೋಟದಿಂದಲೇ ಮದನಪರವಶನಾದ ಶ್ರೀಕೃಷ್ಣನ ಮುಖಕಮಲವನ್ನು ನೋಡಿ ಧ್ಯಾನಿಸುತ್ತಾ ನಿಂತಿದ್ದಾಳೆ. ನಿತಂಬಿನಿಯೋರ್ವಳು ಏನೋ ಗುಟ್ಟು ಹೇಳುವವಳಂತೆ ಹರಿಯ ಕಿವಿಯ ಹತ್ತಿರಕ್ಕೆ ಬಂದು ಮನೋಹರವಾಗಿ ಚುಂಬಿಸಿದಳು. ಆಗ ಅವನ ಕಪೋಲವು ನವಿರೆದ್ದು ಅವಳಿಗೆ ಅನುಕೂಲವಾಗಿ ತೋರುತ್ತದೆ. ಹರಿಯು ಯಮುನಾತೀರದ ಲತಾಕುಂಜದಲ್ಲಿ ಕುಳಿತುಕೊಂಡನು. ಅಲ್ಲಿಗೆ ಒಬ್ಬಳು ಹೋಗಿ ಮದನಕೇಳಿಗೆ ಇಷ್ಟಪಟ್ಟು ಕೃಷ್ಣನನ್ನೆಳೆಯುತ್ತಾಳೆ. ಆಗ ನಾನಲ್ಲಿದ್ದಾಗ ಒಮ್ಮೆ ರಾಸಕ್ರೀಡೆಯಲ್ಲಿ ಕೃಷ್ಣನ ಸಂಗಡ ಸರಿಯಾಗಿ

ಕುಣಿದ ಓರ್ವಳನ್ನು ಹೊಗಳಿದನು. ಆ ಲತಾಂಗಿಯರೆಲ್ಲರೂ ವೃತ್ತಾಕಾರವಾಗಿ ನಿಂತು ರಾಸಕ್ರೀಡೆಯಾಡುತ್ತಾರೆ. ರಾಧೆ, ಅಲ್ಲಿ ರಂಗನು ಒಬ್ಬಳನ್ನು ಆಲಿಂಗಿಸುತ್ತಾನೆ, ಮತ್ತೊಬ್ಬಳನ್ನು ಮುದ್ದಿಸುತ್ತಾನೆ, ಇನ್ನೊಬ್ಬ ರಮಣಿಯನ್ನು ರಮಿಸುತ್ತಾನೆ, ಹಾಗೆಯೇ ಮತ್ತೊಬ್ಬಳನ್ನು ಹಿಂಬಾಲಿಸಿ ನಡೆಯುತ್ತಾ ಇದ್ದಾನೆ.'

(ಈ ರೀತಿಯ ಮಾತನ್ನೇ ಸಖಿಯು ಮುಂದರಿಸಿದ ಬಗೆಯನ್ನು ಕವಿಯು ಮುಂದಿನ ಶ್ಲೋಕದಲ್ಲಿ ಹೇಳುತ್ತಾನೆ. ಅದರ ಸಾರವಿದು:—)

ರಾಧೆ, ಅಲ್ಲಿ ಹರಿಯು ಅನುರಾಗದಿಂದ ಎಲ್ಲರನ್ನೂ ಆನಂದಗೊಳಿಸುತ್ತಾನೆ. ನೀಲೋತ್ಪಲಗಳಂತೆ ಶ್ಯಾಮಲವಾದ ಕೋಮಲ ಅಂಗಗಳಿಂದ ಅನಂಗೋತ್ಸವವನ್ನು ನೆರವೇರಿಸುತ್ತಾನೆ. ವ್ರಜ ಸುಂದರಿಯರಿಂದ ಸರ್ವಾಂಗಾಲಿಂಗನವನ್ನು ಯಥೇಚ್ಛವಾಗಿ ಮಾಡಿಸಿಕೊಳ್ಳುತ್ತಾನೆ. ಮನೋಹರಾಂಗನಾದ ಮಾಧವನು ಈ ಮಧುಮಾಸದಲ್ಲಿ ಶೃಂಗಾರರಸ ಸ್ವರೂಪಿಯಾಗಿ ಕ್ರೀಡಾನಿರತನಾಗಿದ್ದಾನೆ.

(ಈ ಮಾತುಗಳನ್ನು ಕೇಳುತ್ತಿದ್ದ ಹಾಗೆಯೇ ರಾಧೆಯ ಚಿಂತಾಕುಲ ಹೃದಯದಲ್ಲಿ ಆಶೆಯು ಉದಯವಾಗುತ್ತದೆಂಬ ಅಭಿಪ್ರಾಯದಿಂದ ಕವಿಯು ಸುತ್ತುಮುತ್ತಲಿನ ಪ್ರಕೃತಿಯ ಕಡೆಗೆ ಪುನಃ ಕಣ್ಣೋಡಿಸುತ್ತಾನೆ—)

ಚಂದನದ ಮರಗಳಿರುವ ಮಲಯಾದ್ರಿಯಲ್ಲಿ ಸದಾ ವಾಸಮಾಡುವ ಭುಜಂಗಗಳ ಉಪದ್ರವದಿಂದ ಬೇಸತ್ತ ಮಂದಮಾರುತನು ಹಿಮಸ್ನಾನ ಮಾಡಲಿಕ್ಕಾಗಿಯೋ ಎಂಬಂತೆ ಹಿಮಾಲಯದತ್ತ ಉತ್ತರಕ್ಕೆ ಬೀಸತೊಡಗಿದನು. ಮಾಂದಳಿರನ್ನು ಕಂಡು ಕೋಗಿಲೆಗಳು ಸಂತಸದಿಂದ ಇಂಪಾಗಿ ಹಾಡಿದವು.

(ಇಲ್ಲಿಗೆ ಸಖಿಯ ಮಾತು ಮುಗಿದುದು. ಇಷ್ಟು ಹೇಳಿ ಕವಿಯು ಒಂದನೆಯ ಸರ್ಗವನ್ನು ಮುಗಿಸುವ ಮಂಗಲ ಶ್ಲೋಕವನ್ನು ಈ ಕೆಳಗಿನ ಅರ್ಥದಿಂದ ಹೇಳುತ್ತಾನೆ.)

ನಂದಗೋಕುಲದಲ್ಲಿ ರಾಧಾಕೃಷ್ಣರೂ ಗೋಪಿಕೆಯರೂ ರಾಸಕ್ರೀಡಾನಿರತರಾಗಿದ್ದರು. ಆಗ ರಾಧೆಯು ರಂಗನಲ್ಲಿರಿಸಿದ ಪ್ರೇಮವುಕ್ಕಿದವಳಾಗಿ, ರಾಗಾಂಧಳಾಗಿ—ಆಗ ಏನೋ ಹರಿಯು ಹೇಳಿದ ಮಾತನ್ನು ಹೊಗಳುವ ನೆವದಿಂದ 'ಇಂತಹ ಅಮೃತ ವಚನವಾಡಿದ ನಿನ್ನ ಮುಖವೇ ಅಮೃತ

ಮಯ'ವೆನ್ನುತ್ತಾ ಆ ಸುಂದರಿಯರೆಲ್ಲರೆದುರಿನಲ್ಲೇ ಅತನನ್ನು ಎದೆಗಪ್ಪಿ ಚುಂಬಿಸಿದಳು. ಆಗ ಮುಗುಳುನಕ್ಕ ಮನೋಹರ ಮೂರ್ತಿಯಾದ ನಿಮ್ಮನ್ನು ಪಾಲಿಸಲಿ.

(ಇಲ್ಲಿಗೆ ಒಂದನೆಯ ಸರ್ಗ ಮುಗಿದುದು.)

ಶ್ರೀಕೃಷ್ಣನು ಗೋಪಾಂಗನೆಯರೊಂದಿಗೆ ಆನಂದದಲ್ಲಿರುವನೆಂಬ ಕಾರಣದಿಂದ ಈ ಸರ್ಗವನ್ನು 'ಸಾಮೋದದಾಮೋದರ' ಎನ್ನುತ್ತಾನೆ ಕವಿ.

ಎರಡನೆಯ ಸರ್ಗ

ಅಕ್ಲೇಶ ಕೇಶವ

(ಹಿಂದಿನ ಸರ್ಗದಲ್ಲಿ ಹೇಳಿದಂತೆ–ಮಾಧವನು ಉದ್ಯಾನದಲ್ಲಿ ಗೋಪ ಬಾಲೆಯರೊಡಗೂಡಿ ವಿಹರಿಸುತ್ತಾ ಬಗೆಬಗೆಯ ನೃತ್ಯದಲ್ಲಿ ಲೀನನಾ ಗಿದ್ದನು. ಅವನಿಗೆ ಸಕಲ ಲಲನೆಯರಲ್ಲೂ ಸಮಾನ ಅನುರಾಗ. ರಾಧೆಗಾದರೋ ತಾನೇ ಮೇಲೆಂಬ ಭಾವನೆಯಿತ್ತು. ಅದೀಗ ತೊಲಗ ಬೇಕಾಯಿತು. ಅದರಿಂದ ಅವಳಲ್ಲಿ ಒಂದು ತರದ ಈರ್ಷ್ಯೆಯುಂಟಾಗಿ ತಾನು ಇದ್ದಲ್ಲಿಂದ ಮತ್ತೊಂದೆಡೆಗೆ ನಡೆದಳು—ಅಲ್ಲಿ ಒಂದು ಲತಾಕುಂಜ ದಲ್ಲಿ ಯಾರಿಗೂ ಕಾಣದಂತೆ ಕುಳಿತುಬಿಟ್ಟಳು. ಆಗ ಅಲ್ಲಿ ತುಂಬಿಗಳ ಝೇಂಕಾರಧ್ವನಿಯು ಅವಳ ಭಾವಾವೇಗವನ್ನು ಇಮ್ಮಡಿಸಿಬಿಟ್ಟಿತು. ತಬ್ಬಿ ಬ್ಬಾದ ರಾಧೆಯು ಸಮೀಪ ನಿಂತಿದ್ದ ಸಖಿಯೊಡನೆ ತನ್ನ ಬಯಕೆ–ಮನೋ ಗತ—ತೋಡಿಕೊಳ್ಳುತ್ತಾಳೆ. ರಾಧೆಯ ಆ ಮಾತು ಈ ಐದನೆಯ ಅಷ್ಟ ಪದಿಯಿಂದ ತಿಳಿಯಬಹುದು.)

"ಸಖಿ, ಅಂದೊಮ್ಮೆ ಹರಿಯು ಇದೇ ಸ್ಥಳದಲ್ಲೇ ನಮ್ಮೊಂದಿಗೆ ರಾಸ ಕ್ರೀಡೆಯಾಡುತ್ತಾ ವಿವಿಧ ವಿಲಾಸಗೋಷ್ಠಿಯನ್ನು ನಡೆಸಿದ್ದನು. ಆ ರೀತಿ ಯಲ್ಲಿದ್ದ ಹರಿಯ ನೆನಪು ನನ್ನ ಮನಸ್ಸಿಗೆ ರೂಪುಗಟ್ಟುತ್ತಿದೆ. ಅತನ ಅಧರದಿಂದ ಅಮೃತ ಸುರಿವಂತೆ ಧ್ವನಿಸುವ ಆ ವೇಣುವನ್ನೂದುವಾಗ ಅವನ ಆ ಕಟಾಕ್ಷವಿಕ್ಷೇಪ, ಆ ತಲೆಯಲ್ಲಾಡಿಸುವ ವೈಖರಿ, ಕಪೋಲಗಳಲ್ಲಿ ಕರ್ಣಾಭರಣಗಳ ಕುಣಿದಾಟ–ಅಹಾ, ಏನು ಚಂದ! ಆ ರೂಪರಾಶಿ! ಯತ್ನಿಸಿದರೂ ಮರೆಯಲು ಸಾಧ್ಯವಿಲ್ಲ. ಅಂದದ ನವಿಲುಗರಿಗಳಿಂದ

ಅಲಂಕರಿಸಿದ ಕೂದಲುಗಳುಳ್ಳ ಆ ನೀಲಾಂಗನು ಕಾಮನ ಬಿಲ್ಲುಗಳಿಂದ ಮನೋಹರವಾಗಿ ತೋರುವ ಕಾರ್ಮೋಡದಂತಿದ್ದನು. ಈಗಲೂ ನನಗೆ ಅದೇ ರೂಪ ತೋರುತ್ತದೆ. ಆದರೆ—ನೋಡು, ಅವನೀಗ ಬೇರೆ ಗೋಪನಿತಂಬಿನಿಯರ ಮುಖಚುಂಬನದಲ್ಲಿ ಮೈಮರೆತಿದ್ದಾನಲ್ಲಾ! ಹೂವಿನಂತೆ ಮನೋಹರವೂ, ತಳಿರಿನಂತೆ ಸುಂದರವೂ ಆದ ಚೆಂದುಟಿಯಲ್ಲಿ, ಮಿಂಚುವ ಎಳೆನಗೆಯಿಂದ ಶೋಭಿಸುವ ಹರಿಯನ್ನು ಮರೆಯಬೇಕೆಂದರೂ ಹೇಗೆ ಸಾಧ್ಯ? ಅವನು—ಪುಲಕಗೊಂಡ ಕೋಮಲ ಬಾಹುಗಳಿಂದ ಅನೇಕ ಗೋಪತರುಣಿಯರನ್ನು ಬಳಸಿಕೊಂಡಿರುವನಲ್ಲವೇ? ಆದರೂ ಅಂಗಾಂಗಗಳ ಆಭರಣರತ್ನಗಳು ಕತ್ತಲೆಯನ್ನೂ ಬೆಳಗಿಸಿದ ಆ ಸುದಿನವನ್ನು ಮರೆಯಲಸಾಧ್ಯ. ಮೋಡಗಳ ನಡುವೆ ರಾರಾಜಿಸುವ ಚಂದ್ರನಿಗಿಂತಲೂ ಮಿಗಿಲಾದ ಕಾಂತಿ—ಆತನ ಹಣೆಯಲ್ಲಿರುವ ಚಂದನ ತಿಲಕಕ್ಕಿದೆ. ಪೀನಪಯೋಧರ ಮರ್ದನಕ್ಕೆ ಹಿಂಜರಿಯದ ವಿಶಾಲವಾದ ಎದೆ—ಅವನದ್ದು. ಕೆನ್ನೆಗಳು ಮಕರಾಕೃತಿಯ ರತ್ನಕುಂಡಲಗಳಿಂದ ಬೆಳಗುತ್ತವೆ. ಹೆಚ್ಚೇಕೆ, ಆ ಪೀತಾಂಬರಧಾರಿಯನ್ನು ಸ್ತ್ರೀಯರೆಂದೇನು! ಮುನಿ-ಮನುಜ-ಸುರಾ-ಸುರರೆಲ್ಲರೂ ಹಿಂಬಾಲಿಸಲೆಳಸುತ್ತಾರೆ. ಸಖಿ, ಅವನು ನಮ್ಮ ಸಂಕೇತಸ್ಥಾನವಾದ ಆ ಕದಂಬ ವೃಕ್ಷದೆಡೆಗೆ ಬಂದು, ನನ್ನ ಪ್ರಣಯಕೋಪವನ್ನು ಪರಿಹರಿಸುತ್ತಾ, ಮದನಪರವಶತೆಯನ್ನು ಸೂಚಿಸುವ ಚೆಲುನೋಟದಿಂದ ನನ್ನನ್ನು ರಮಿಸುತ್ತಿದ್ದನು. ಅಯ್ಯೋ ಸಖಿ, ಆ ಕಾರುಣ್ಯನಿಧಿಯಾದ—ಮೋಹನಾಂಗನಾದ—ಹರಿಯ ನೆನಪೇ ನನ್ನ ಹೃದಯದಲ್ಲಿ ತುಂಬಿಹೋಗಿದೆ.”

(ಈ ರೀತಿ ಹೇಳುತ್ತಾ ರಾಧೆಯು ‘ತನಗೆ ಹರಿಯಲ್ಲಿ ಕೋಪಕ್ಕೆ ಕಾರಣವಿದ್ದರೂ ಆತನು ನನಗೆ ಪ್ರಿಯನೇ ಸರಿ’ ಎಂಬ ಮಾತನ್ನು ಪ್ರತ್ಯೇಕ ಹೇಳಿದ್ದಾಳೆ.)

“ಸಖಿ, ಹರಿಯು ನನ್ನ ಗೊಡವೆಯನ್ನೇ ಬಿಟ್ಟು, ಇತರ ಸ್ತ್ರೀಯರೊಡಗೂಡಿ ನಲಿದಾಟಕ್ಕೆ ತೊಡಗಿದ್ದರೂ ಕೂಡ ನನ್ನೀ ವಿಪರೀತಗುಣದ ಮನಸ್ಸು ಅವನಲ್ಲೇ ನೆಲಸಿಬಿಟ್ಟಿದೆ. ಅವನ ಸೌಂದರ್ಯ—ಸೌಶೀಲ್ಯಾದಿ ಗುಣಗಳನ್ನು ಮಾತ್ರ ಈ ಮನಸ್ಸು ಲೆಕ್ಕಿಸುತ್ತದೆಯೇ ಹೊರತು, ಅವನು ಮಾಡಿದ ಅನ್ಯಾಯವನ್ನಲ್ಲ. ಅವನಲ್ಲಿ ಕೋಪ ತಾಳಲು ಈ ಮನಸ್ಸು

ಅಪ್ಪಿತಪ್ಪಿಯಾದರೂ ಒಪ್ಪಿಕೊಳ್ಳುವದೇ ಇಲ್ಲ. ಅವನ ನೆನಪಿನಿಂದ ಈ ಮನಸ್ಸು ಸಂತೋಷಪಡುತ್ತಲೇ ಇದೆ. ನಾನೇನು ಮಾಡಲಿ ಸಖಿ? ಹೇಳು."

(ರಾಧೆಯು ಕೃಷ್ಣನ ನೆನಪಿನಿಂದ ವಿವಶಳಾಗಿ ಆತನನ್ನು ಸೇರಲೇ ಬೇಕೆಂಬ ಆಶೆಯಿಂದ ಆತನೊಂದಿಗೆ ಹಿಂದೆ ತಾನು ಅನುಭವಿಸಿದ ಏಕಾಂತದ ಸುಖಾನುಭವಗಳನ್ನು ಒಂದೊಂದಾಗಿ ಸಖಿಯೆದುರು ಹೇಳಿಬಿಡುತ್ತಾಳೆ. ಆರನೆಯ ಅಷ್ಟಪದಿಯಲ್ಲಿ ಹೇಳಿದ ಆ ಮಾತಿನ ಅರ್ಥ ಹೀಗಿದೆ—)

"ಸಖಿ, ಮದನ ವಿಲಾಸದ ವಿವಿಧ ಕೇಳಿಗಾಗಿ ನಾನು ತವಕಗೊಂಡಿದ್ದೇನೆ. ಉದಾರಗುಣಸಂಪನ್ನನಾದ ಆ ಕೇಶವನನ್ನು ಹೇಗಾದರೂ ಒಡಂಬಡಿಸಿ ನನ್ನೊಂದಿಗೆ ರಮಿಸುವಂತೆ ಮಾಡೇ. ಕೇಳು, ಅಂದೊಮ್ಮೆ ನಾನು ಲತಾಕುಂಜಕ್ಕೆ ಹೋಗಿದ್ದೆ. ಆಗ ಅವನು ಕತ್ತಲಲ್ಲಿ ಅಡಗಿ ನಿಂತಿದ್ದನು. ಕೃಷ್ಣನೇಕೆ ಬರಲಿಲ್ಲವೆಂದು ನಾನು ಅತ್ತಿತ್ತ ಹುಡುಕಿದೆನು. ಆಗ ಆ ವಿಲಾಸಪ್ರಿಯನು ನಕ್ಕುಬಿಟ್ಟನು. ಏಕಾಂತದಲ್ಲಿ ಅದುವೇ ನಮ್ಮ ಮೊದಲ ಸಮಾಗಮ. ನಾನು ತುಂಬಾ ನಾಚಿದ್ದೆನು. ಆಗ ಅವನು ಎಷ್ಟೋ ಪ್ರಿಯವಚನಗಳಿಂದ ನನ್ನನ್ನು ಆದರಿಸಿದ್ದುಂಟು. ಆ ಮೇಲೆ ನಾನು ಮೃದುಮಧುರವಾಗಿ—ನಗೆಯಿಂದ—ಮಾತನಾಡತೊಡಗಿದೆ. ಅಷ್ಟರಲ್ಲೇ ಅವನು ನನ್ನ ಉಡಿಗೆಯನ್ನು ಜಘನದಿಂದಲೂ ಸಡಿಲಿಸಿದ್ದನು. ಎಳೆತಳಿರಿನ ಹಾಸಿಗೆಯಲ್ಲಿ ನನ್ನನ್ನೊರಗಿಸಿದ ಅವನು ನನ್ನೆದೆಯಲ್ಲೇ ಒರಗಿದನು. ಆಲಿಂಗಿಸಿ ನಾನು ಮುದ್ದಾಡಿದಾಗ ಅವನೂ ಅಪ್ಪಿ ಅಧರಪಾನಕ್ಕೆ ತೊಡಗಿದನು. ಮತ್ತೇನು! ಆಲಸ್ಯದಂತಾಗಿ ಕಣ್ಣು ಮುಚ್ಚಿದೆನು. ಅವನ ಕಪೋಲಗಳು ರೋಮಾಂಚಗೊಂಡುದು ನನಗೂ ಪ್ರಿಯವೆನಿಸಿತು. ಬೆವರಿ ಒದ್ದೆಯಾದೆ. ಅವನೋ ಆನಂದಲೋಲನಾಗಿದ್ದನು. ಆಗಲೇ ನಾನು ಕೋಗಿಲೆಯಂತೆ ಧ್ವನಿಗೈದೆನೆಂದು ನೆನಪು. ಅವನೇನು! ಸ್ವೇಚ್ಛಾವಿಹಾರಿಯಾಗಿದ್ದನು. ನನ್ನ ಮುಡಿದ ಹೂಗಳು ಚೆದರಿ, ಮುಂಗೂದಲು ಚಲ್ಲಾಪಿಲ್ಲಿಯಾಯಿತು. ಸ್ತನಗಳಲ್ಲಿ ಅವನ ನಖಗಳ ಗಾಯಗಳಾದವು. ಆಗಲೇ ನನಗೆ ನನ್ನ ಕಾಲಂದುಗೆಯ ಮಣಿಗಳ ಶಬ್ದ ಕೇಳಿಸಿದವು. ಆಗ-ಅವನೋ ವಿಜಯಹೊಂದಿದನು. ತಕ್ಷಣ ನನ್ನ ಉಡಿದಾರ ಮಣಿಗಳು ಶಬ್ದಿಸಿದಾಗ ಉಡಿದಾರವೇ ಕಡಿದುಹೋಯಿತು. ನನ್ನ ಕೇಶಪಾಶ

[10ನೇ ಪುಟವು ಕವರಿನ 2ನೇ ಪುಟಕ್ಕೆ ಮುಂದುವರಿದಿದೆ.]

Edited, Printed & Published by K. V. Shenoy
at The Prabhat Printers Ltd., Mangalore.